ಇಟ್ಟುಕೊಂಡು ಕೂಡುತ್ತಾರಲ್ಲಾ ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ? ಅದಕ್ಕೆ ಲೈಸನ್ಸ್ ಇಲ್ಲ, ಪೋಲಿಸ್ ಪರ್ಮಿಷನ್ ಇಲ್ಲ, ಪೋಲಿಸ್‌ನವರು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆ. ನಾವು ಶಾಸಕರು ಪೋಲಿಸ್ ಆಯುಕ್ತರನ್ನು ಭೇಟಿಯಾಗಬೇಕೆಂದರೆ ಅವರು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬಂದು ಭೇಟಿಯಾಗಿ ಎಂದು ಹೇಳುತ್ತಾರೆ. ಹೀಗಾದರೆ ನಾವು ಯಾವ ರೀತಿ ಇದನ್ನು ನಿಯಂತ್ರಣ ಮಾಡುವುದು?

ಶ್ರೀ ಆರ್ ರೋಶನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಆ ತರಹ ಹೇಳಿದ ಪೋಲಿಸ್ ಕಮೀಷನರ್‌ನ್ನು ಮತ್ತು ಶಾಸಕರು ಯಾರು ಇದ್ದಾರೆ ಅವರನ್ನು ಕರೆದು ನಾನು ನನ್ನ ಕಛೇರಿಯಲ್ಲಿ ಒಂದು ಮೀಟಿಂಗ್‌ನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಸದಾನಂದಗೌಡರ ಪರವಾಗಿ ಶ್ರೀ ಕೆ. ಜಯರಾಮಶೆಟ್ಟಿಯವರು ಪ್ರಶ್ನೆಯನ್ನು ಕೇಳಬಹುದು.

ಕಡಬ ವಿದ್ಯುತ್‌ಸಬ್ - ಸ್ಟೇಷನ್

395 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಪೂರ್ಣಗೊಂಡ ಕಡಬ ವಿದ್ಯುತ್ ಸ್ಟೇಷನ್ನಿನಿಂದ, ಯಾವ್ಯಾವ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುವುದು?*

ಆ) *ಪುತ್ತೂರು ಹಾಗೂ ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಿಗೆ ವಿದ್ಯುತ್ ಸೌಲಭ್ಯ ನೀಡುವಲ್ಲಿ, ತಾರತಮ್ಯ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಕಡಬ ಸಬ್ ಸ್ಟೇಷನ್ನಿಗೆ ಸಿಬ್ಬಂದಿಗಳ ಕೊರತೆ ಇರುವುದು, ತಾರತಮ್ಯ ನಡೆದಿರುವುದು, ಸರ್ಕಾರದ ಗಮನಕ್ಕೆ ಬಂದಿದ್ದರೆ, ಯಾವಾಗ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಪ್ರಸ್ತುತ ಪೂರ್ಣಗೊಂಡ - ಕಡಬ ವಿದ್ಯುತ್ ಸ್ಟೇಷನ್ನಿನಿಂದ ಈ ಕೆಳಕಂಡ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. (31). ಕಡಬ, ಬಂಟ್ರ ಕುಟ್ಟಪಾಡಿ, ರಂಗಿಲಾಡಿ, ನೂಜಿ ಬಾಲ್ತಲ, ಬಿಳಿನೆಲೆ, ನೆಟ್ಟಣ, ಕೊಂಬೂರು, ಸಿರಿವಾಗಿಲು, ಶಿರಾಡಿ, ಇಡಲಂಪಾಡಿ ಬಲ್ಯ, ಕೊಂಟೂರು ವರಾಬಿ, ಆಲಂಕಾರು, ಕೊಯ್ಲ, ಕೊರಿಂಬಾಲ, ಚಾರ್ವಕ, ಬೊಲ್ವಾಡಿ, ಎಡಮಂಗಿಲ, ಕಿನ್ಯಾ ಕುತಕುಂಜ, ಐವತ್ತೊಕ್ಕಲು, ಬಲ್ಪ, ಪೊಂಬತ್ತಾಡಿ, ಸುಬ್ರಮಣ್ಯ ಶಶಿಲ, ಶಿವಾಜಿ, ಕೊಕ್ಕಡ, ರೆಕ್ಯಾ, ಆರಿಸಿನಮಕ್ಕಿ. (81 ಹಳ್ಳಿಗಳು)

ಆ) ಪುತ್ತೂರು ಮತ್ತು ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಿಗೆ ವಿದ್ಯುತ್ ಸೌಲಭ್ಯ ನೀಡುವಲ್ಲಿ, ಯಾವ ತಾರತಮ್ಯವೂ ನಡೆದಿಲ್ಲ. ಸಂಪರ್ಕ ಸಾಧ್ಯತೆಯನ್ನು ನೋಡಿಕೊಂಡು ಮತ್ತು ಮಂಡಳಿಯ ನಿಯಮಾನುಸಾರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

೫) ಕಡಬ ಸಬ್-ಸ್ಟೇಷನ್‌ನಲ್ಲಿ ಸಿಬ್ಬಂದಿಯ ಕೊರತೆ ಇದ್ದು, ಗುತ್ತಿಗೆ ಆಧಾರದ ಮೇಲೆ ನಿರ್ವಹಣೆ ವಹಿಸಿಕೊಡಲು ಮಂಡಳಿಯು ಮಂಜೂರಾತಿ ನೀಡಿದೆ. ಸದ್ರಿ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಿಕೊಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ. ಜಯರಾಮ ಶೆಟ್ಟಿ : ಸನ್ಮಾನ್ಯ ಉಪಾಧ್ಯಕ್ಷರೆ, ಕಡಬಾ ಸಬ್ ಸ್ಟೇಷನ್‌ನಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿದೆ ಎಂದು ಕೇಳಿದ್ದೇನೆ. ಬಹಳಷ್ಟು ಗ್ರಾಮಗಳ ಹೆಸರನ್ನು ನಮೂದಿಸಿದ್ದಾರೆ. ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಈ ಎಲ್ಲಾ ಗ್ರಾಮಗಳ ಮನೆಗಳಿಗೆ ವಿದ್ಯುತ್ ಕೊಡುವಂತಹ ಅರ್ಜಿಗಳನ್ನೆಲ್ಲಾ ಪರಿಶೀಲನೆ ಮಾಡಿದ್ದೀರಾ? ಈ ಎಲ್ಲಾ ಗ್ರಾಮಗಳಿಗೆ ಕೊಡದಿರುವ ಸಂದರ್ಭದಲ್ಲಿ ಕಡಬಾ ಸಬ್ ಸ್ಟೇಷನ್, ಪುತ್ತೂರು ಮತ್ತು ಸುಳ್ಯಾ ತಾಲ್ಲೂಕುಗಳಿಗೆ ಸೀಮಿತವಾಗಿದ್ದರೂ ಕೂಡ, ಇದನ್ನು ಬೆಳ್ತಂಗಡಿ ತಾಲ್ಲೂಕಿಗೆ ಇಲ್ಲಿಂದ ವಿದ್ಯುತ್ ಸರಬರಾಜಿಗೆ ಪ್ರತ್ಯೇಕ ವ್ಯವಸ್ಥೆಗೆ ಕಲ್ಪನೆ ಮಾಡುತ್ತಿದ್ದೀರೋ? ಮಾಡಿದ್ದರೆ ಏನು ಕಾರಣ? ಒಂದು ಗ್ರಾಮದಲ್ಲಿ ಎರಡು ಮನೆಗಳಿಗೆ ವಿದ್ಯುತ್ ಸಂಪರ್ಕ ಇಡೀಗ್ರಾಮಕ್ಕೆ ಕಲ್ಪಿಸಿದ್ದೇವೆಂದು ಹೇಳುವುದು ಎಷ್ಟು ಸಮಂಜಸ? ಎರಡನೆಯದಾಗಿ, ಈ ಸಬ್ ಸ್ಟೇಷನ್‌ದಲ್ಲಿ ಈಗ ಇಬ್ಬರು ಸಿಬ್ಬಂದಿಗಳು ಇದ್ದಾರೆ, ಸಿಬ್ಬಂದಿಗಳ ಬಹಳಷ್ಟು ಕೊರತೆಯಿಂದ ಆ ಕ್ಷೇತ್ರದ ಎಲ್ಲಾ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲು ತೊಂದಲೆಯಾಗಿದೆ. ಆದ್ದರಿಂದ ಸಿಬ್ಬಂದಿ ವರ್ಗದವರನ್ನು ಹೆಚ್ಚು ಮಾಡುತ್ತೀರಾ, ಇದರ ಬಗ್ಗೆ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಈಗಾಗಲೇ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಲಾಗಿದೆ. ಈ ಕಡಬಾ ಸಬ್‌ಸ್ಟೇಷನ್‌ನಲ್ಲಿ ಸುಮಾರು 31 ಹಳ್ಳಿಗಳು ಇದರಲ್ಲಿ ಒಳಪಟ್ಟಿವೆ. ಇದರಲ್ಲಿ ಯಾವ ಹಳ್ಳಿಗಳು, ಯಾವ ತಾಲ್ಲೂಕು ಬರುತ್ತವೆ ಎಂದು ಹೆಚ್ಚಿಗೆ ಮಾಹಿತಿ ನಮಗೆ ಗೊತ್ತಿಲ್ಲ. ಅಲ್ಲಿಯ ಸಿಬ್ಬಂದಿಗಳ ಸಂಖ್ಯೆ ಕಡಿಮೆ ಇದೆ ಎಂದು ಇದನ್ನು ಕಂಟ್ರಾಕ್ಟ್ ಮೇಲೆ ಕೊಡಬೇಕೆಂದು ಈಗಾಗಲೇ ತೀರ್ಮಾನ ತೆಗೆದುಕೊಳ್ಳಲಾಗಿದೆ. ಆರು ತಿಂಗಳ ಕಾಂಟ್ರಾಕ್ಟ್ ಅವಧಿಯನ್ನು ನೇಮಿಸಲಾಗಿದೆ, ಬೋರ್ಡ್ ಅಪ್ರೂವಲ್ ಕೂಡ ಆಗಿದೆ, ಇನ್ನು ಒಂದೆರಡು ದಿನಗಳಲ್ಲಿ ಕಡಬಾ ಸಬ್ ಸ್ಟೇಷನ್ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ತಾವು ಬೆಳ್ತಂಗಡಿ ತಾಲ್ಲೂಕಿಗೆ ಆ ಸಬ್ ಸ್ಟೇಷನ್‌ನಿಂದ ವಿದ್ಯುತ್‌ನ್ನು ತೆಗೆದುಕೊಳ್ಳುವುದನ್ನು ಆ ಜನರು ವಿರೋಧ ಮಾಡುತ್ತಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರ ಸಮಂಜಸವಲ್ಲ. ಆ ಎರಡು ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲು ತಮ್ಮಲ್ಲಿ ಅವಕಾಶ ಇಲ್ಲ. ಅಷ್ಟು ದೂರಕ್ಕೆ ಈಗಾಗಲೇ ಕಂಬ ಹಾಕಿದೆ, ವೈರ್‌ಹಾಕಿದೆ ಅದನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

ಶ್ರೀ ಶರಣಬಸಪ್ಪ ದರ್ಶನಾಪುರ್ : ಇದರಲ್ಲಿ 31 ಹಳ್ಳಿಗಳ ಹೆಸರುಗಳನ್ನು ಕೊಟ್ಟಿದ್ದೇವೆ.

ಶ್ರೀ ಕೆ. ಜಯರಾಮ ಶೆಟ್ಟಿ : ಸಂಬಂಧಪಟ್ಟ ಏರಿಯಾಕ್ಕೆ ಈಗ ನೀವು ಹೊಸ ಸಂಪರ್ಕವನ್ನು ಕೊಡುತ್ತಾ ಇದ್ದೀರಿ.

ಶ್ರೀ ಶರಣಬಸಪ್ಪ ದರ್ಶನಾಪುರ : ಬೆಳ್ತಂಗಡಿ ತಾಲ್ಲೂಕು ಎಂದು ಹೇಳುತ್ತಿದ್ದೀರಿ, ಯಾವುದರಿಂದಲೂ ನಾವು ಕೊಡಬಹುದು. ಬೆಳ್ತಂಗಡಿ ಸ್ಟೇಷನ್‌ನಿಂದ ಕೊಡಬಾರದು ಎಂದು ಏನೂ ಇಲ್ಲ. ಆ ಸಬ್ ಸ್ಟೇಷನ್‌ನಿಂದ ಅಲ್ಲಿ ಬರತಕ್ಕಂತಹ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ಕೊಡಲು ನಾವು ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಕೆ. ಜಯರಾಮಶೆಟ್ಟಿ : ಇದ್ದ ಏರಿಯಾಕ್ಕೆ ಕೊಡಲು ಆಗುತ್ತಾ ಇಲ್ಲ. ಒಂದು ಗ್ರಾಮದ ಒಂದು, ಎರಡು ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಟ್ಟು, ಇಡೀ ಹಳ್ಳಿಗೆ ಕೊಟ್ಟಿದ್ದೇವೆ ಎಂದು ಹೇಳಿಕೆಯನ್ನು ಕೊಡುತ್ತಿದ್ದೀರಿ. ಆದ್ದರಿಂದ ಈ ಹಿಂದೆ ಬಂದ ಅರ್ಜಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದು ಕೇಳಿದ್ದೇವೆ.

ಉಪಾಧ್ಯಕ್ಷರು : ಅವರು ವಿವರವಾದ ಮಾಹಿತಿಯನ್ನು ಕೇಳುತ್ತಿದ್ದಾರೆ, ಅದನ್ನು ಒದಗಿಸಿಕೊಡಿ.

ಶ್ರೀ ಕೆ. ಜಯರಾಮಶೆಟ್ಟಿ : ಬಂದ ಅರ್ಜಿಗಳನ್ನು ಪುರಸ್ಕಾರ ಮಾಡಿ.

ಶ್ರೀ ಶರಣಬಸಪ್ಪ ದರ್ಶನಾಪುರ : ಯಾವ ಹಳ್ಳಿಗೆ ವಿದ್ಯುತ್ ಕಲ್ಪಿಸಿಲ್ಲ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಸೂಕ್ತ ಆಜ್ಞೆಯನ್ನು ನೀಡುತ್ತೇವೆ. ಅವರು ಆ ಹಳ್ಳಿಗಳಿಗೆ ವಿದ್ಯುತ್ ಕಲ್ಪಿಸುತ್ತಾರೆ. ಆ ಹಳ್ಳಿಗಳ ಹೆಸರುಗಳನ್ನು ಕೊಡಿ.

ಉಪಾಧ್ಯಕ್ಷರು : ಆ ಹಳ್ಳಿಗಳ ಹೆಸರುಗಳನ್ನು ಅವರಿಗೆ ಕೊಡಿ.

ಕುಂದಾಪುರ ತಾಲ್ಲೂಕಿನ ತಲ್ಲೂರು – ಹೆಮ್ಮಡಿಯಲ್ಲಿ ವಿದ್ಯುತ್ ಸಬ್‌ಸ್ಟೇಷನ್ ಪ್ರಾರಂಭ

396 - ಶ್ರೀ ಐ.ಎಮ್. ಜಯರಾಮಶೆಟ್ಟಿ (ಬೈಂದೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ - ತಾಲ್ಲೂರು ಹೆಮ್ಮಡಿಯಲ್ಲಿ ವಿದ್ಯುತ್ ಸಬ್ ಸ್ಟೇಷನ್ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸಬ್- ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಶ್ರೀ ಶರಣಪ್ಪಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕುಂದಾಪುರ ತಾಲ್ಲೂಕಿನ ತಾಲ್ಲೂಕು-ಹೆಮ್ಮಾಡಿಯಲ್ಲಿ 33:11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲುಮಂಡಳಿಯು ಉದ್ದೇಶಿಸಿದೆ.

ಆ) 1997-98ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಾಗಾರಿಯನ್ನು ಸೇರಿಸಲಾಗಿದೆ. ಈ ಕಾರ್ಯವನ್ನು ಶೀಘ್ರವೇ ಪ್ರಾರಂಭಿಸಲಾಗುವುದು.

ಶ್ರೀ ಐ.ಎಮ್. ಜಯರಾಮಶೆಟ್ಟಿ : ಮಾನ್ಯ ಉಪಾಧ್ಯಕ್ಷರೆ, ವಿದ್ಯುತ್ ಸಚಿವರನ್ನು ವಂದಿಸುತ್ತಾ, ಆದಷ್ಟು ಬೇಗ ಮಾಡುತ್ತೇವೆಂದು ಹೇಳಿದ್ದಾರೆ. ಅದು ಗ್ರಾಮಾಂತರ ಪ್ರದೇಶಗಳ ಕೆಲಸವಾದ್ದರಿಂದ